<u>ಸಾಕ್ಷಿಯನ್ನು ದಿಃ**20.01.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ. ವಕೀಲರಿಂದ:</u>

ನಿಡಿ.2 ರಂತೆ ಸಾಮಾನ್ಯ ಸಭೆಯಲ್ಲಿ ಖಾತೆಯನ್ನು ರದ್ದುಪಡಿಸಲಾಗಿದೆ ಎಂದು ಮಾಹಿತಿ ನೀಡಲಾಗಿದೆ ಎಂದರೆ ಸರಿ. ದಿನಾಂಕಃ03.02.2024 ರ ಪಂಚಾಯಿತಿಯ ಸಾಮಾನ್ಯ ಸಭೆಯ ನಡಾವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಹೇಳುವಂತೆ ಯಾವುದೇ ನಡಾವಳಿ ನಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಕಾರಣದಿಂದ ನಡಾವಳಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ಗ್ರಾಮ ಪಂಚಾಯತಿ ಡಿ.ಹೊಸಹಳ್ಳಿ ನಂಬರ್ ಮೇಲ್ಭಾಗದಲ್ಲಿ ನಮೂದು ಆಗಿಲ್ಲ, ಯಾವುದೇ ಪಂಚಾಯತಿಯವರು ಆ ರೀತಿ ದಾಖಲೆ ನೀಡಿದರೆ ಅದರ ನಂಬರ್ ಉಲ್ಲೇಖ ಮಾಡುತ್ತಾರೆ ಎಂದರೆ ಸಾಕ್ಷಿಯು ತನಗೆ ಆ ಕುರಿತು ಹೆಚ್ಚಿನ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ.2 ಸೃಷ್ಟಿಸಿರುವ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ.

ವಾದಿಯ ಹೆಸರಿನಲ್ಲಿ ಈಗಲೂ ಖಾತೆ ಇದೆ ಎಂದು ವಾದಿ ನಿಪಿ.5 ನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ.5 ಕ್ಕೆ ವಿರುದ್ಧವಾಗಿ ನಿಡಿ.5 ನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯವರು ವಾದಿಯ ಹೆಸರಿಗೆ ದೃಢೀಕರಣ ಪತ್ರ ನೀಡಿರುತ್ತಾರೆ ಎಂದು ಸಾಕ್ಷಿಗೆ ಸದರಿ ದಾಖಲೆಯನ್ನು

ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಗುರುತಿಸಿದ ಕಾರಣ ಅದನ್ನು ನಿಪಿ.**14** ಎಂದು ಗುರುತಿಸಲಾಗಿದೆ. ಗ್ರಾಮ ಪಂಚಾಯಿತಿಯವರು ವಾದಿಗೆ 2024-25ರ ಸಾಲಿನ ಡಿಮ್ಯಾಂಡ್ ರಿಜಿಸ್ಟರ್ ನ್ನು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ದಾಖಲೆಯನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಗುರುತಿಸಿದ ಕಾರಣ ಅದನ್ನು ನಿಪಿ.**15** ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿದ್ದು, ಸದರಿ ಭಾವಚಿತ್ರದಲ್ಲಿ ಮಂಜಯ್ಯನವರ ಕುಟುಂಬವಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲಿ ಕಾಣುವ ಮನೆ ತಾವು ಕಟ್ಟಿಸಿದ್ದು ಎಂದು ಗುರುತಿಸಿದ ಕಾರಣ ಅದನ್ನು ನಿಪಿ.**16** ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಲಾಗಿದ್ದು, ಸದರಿ ಭಾವಚಿತ್ರದಲ್ಲಿ ಮಂಜಯ್ಯನವರ ಕುಟುಂಬ ಮತ್ತು ಅವರ ಮನೆ ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲಿ ಕಾಣುವ ಮನೆ ತಾವು ಕಟ್ಟಿಸಿದ್ದು ಮತ್ತು ತಮ್ಮದು ಎಂದು ಗುರುತಿಸಿದ ಕಾರಣ ಅದನ್ನು ನಿಪಿ.**17** ಎಂದು ಗುರುತಿಸಲಾಗಿದೆ.

ನಿಪಿ.16 ಮತ್ತು ನಿಪಿ.17 ರಲ್ಲಿ ಕಾಣುವ ಮನೆ ನಮ್ಮದಾಗಿದ್ದರೆ ಪಂಚಾಯತಿಯವರು ನಮ್ಮ ಹೆಸರಿನಲ್ಲೇ ಖಾತೆ ನೀಡುತ್ತಿದ್ದರು ಎಂದರೆ ಸಾಕ್ಷಿಯು ಅದು ಕಂದಾಯ ಭೂಮಿ ಯಾಗಿದ್ದು, ತಮ್ಮ ಹೆಸರಿನಲ್ಲಿ ಪಹಣಿ ಇದೆ ಎಂದು ನುಡಿಯುತ್ತಾರೆ. ವಾದಿಯ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನಿಸಿ ಮೇಲ್ಮನವಿ

ಸಲ್ಲಿಸಿದ್ದೇನೆ. ಸದರಿ ಮೇಲ್ಮನವಿಯ ಕುರಿತು ದಾಖಲೆ ಹಾಜರುಪಡಿಸಿಲ್ಲ. ನಮ್ಮ ಜಮೀನಿನಲ್ಲಿ ನಾವು ಯಾವುದೇ ಮನೆ ಕಟ್ಟದೇ ಇದ್ದರೂ ವಾದಿ ಕಟ್ಟಿಸಿರುವುದು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮನೆ ಕಟ್ಟಿದ ಕುರಿತು ಅದರ ವಿಸ್ತೀರ್ಣವನ್ನು ಹಾಗೂ ಅದನ್ನು ಕಟ್ಟಿದ ಕುರಿತು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ.

ದಾವಾ ಆಸ್ತಿಯಲ್ಲಿ ಬಹಳ ವರ್ಷಗಳಿಂದ ವಾದಿ ಮನೆ ಕಟ್ಟಿ ವಾಸವಿರುವ ಕುರಿತು ತಮ್ಮ ವಾದ ಪತ್ರದಲ್ಲಿ ಸಂಪೂರ್ಣವಾಗಿ ಉಲ್ಲೇಖ ಮಾಡಿದ್ದಾರೆ ಎಂದರೆ ಸರಿಯಲ್ಲ ವಾದಿ ವಾದಪತ್ರದಲ್ಲಿ ಏನು ಬರೆಸಿದ್ದಾರೆ ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ದಾವಾ ಆಸ್ತಿಯನ್ನು ವಾದಿಯಿಂದ ಕಬಳಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಮೀನು ಮತ್ತು ನಮ್ಮ ಜಮೀನು ಒಂದಕ್ಕೊಂದು ಹೊಂದಿಕೊಂಡಿದ್ದರು ಅರ್ಧ ಕಿ.ಮೀ. ಅಂತರವಿದೆ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಉಳಿದ ಜಮೀನಿನಲ್ಲಿ ಕೃಷಿಯೇತರ ಚಟುವಟಿಕೆಯನ್ನು ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ನಾವು ಬಲಾಢ್ಯರಾಗಿರುವ ಕಾರಣ ದಾವಾ ಆಸ್ತಿಯಿಂದ ವಾದಿಯನ್ನು ಹೊರಗೆ ಹಾಕಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಅಂಗವಿಕಲರಾಗಿರುತ್ತಾರೆ ಎಂದರೆ ಸರಿ. ವಾದಿಯ ಅಂಗವಿಕಲತೆಯನ್ನು

ದುರುಪಯೋಗಪಡಿಸಿಕೊಂಡು ವಾದಿಗೆ ಆರೋಪಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಸಹ ದಾವಾ ಆಸ್ತಿಯನ್ನು ಮಂಜೂರು ಮಾಡುವಂತೆ ತನ್ನ ತಂದೆಯ ನಂತರ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ.6 ರಿಂದ ನಿಡಿ.11 ರ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಿಸದೇ ನಮ್ಮ ಪ್ರತಿವಾದ ಪತ್ರದ ಆಸ್ತಿಗೆ ಸಂಬಂಧಿಸಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಗೆ ಸಂಬಂಧಿಸಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.6 ರಿಂದ 11 ರ ದಾಖಲೆಗಳಲ್ಲಿ ಮನೆ ಕಾಣಿಸುತ್ತಿಲ್ಲ ಎಂದರೆ ಸಾಕ್ಷಿಯು ಮರದ ಹಿಂದೆ ಮನೆಯ ಹೆಂಚು ಕಾಣುತ್ತಿದೆ ಎಂದು ನುಡಿಯುತ್ತಾರೆ. ನಿಡಿ.6 ರಿಂದ ನಿಡಿ.11 ರಲ್ಲಿ ಕಾಣುವ ಹೆಂಚಿನ ಮನೆ ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.